**ಸಿ.ಡಬ್ಲೂ–5 / ಪಿ.ಡಬ್ಲೂ–7**

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 36/2017**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಾದಪ್ಪ |
| ತಂದೆಯ ಹೆಸರು | : | ನಾಗಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಚಿಲಕಹಳ್ಳಿ ಗ್ರಾಮ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 14.05.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿಗಳು ನನಗೆ ಸಂಬಂಧಿಕರಾಗಬೇಕು. ನಾನು ಯಾವುದೇ ಘಟನೆಯನ್ನು ಕಣ್ಣಾರೆ ನೋಡಿಲ್ಲ ಮತ್ತು ನಾನು ಯಾವುದೇ ಗಲಾಟೆಯನ್ನು ಬಿಡಿಸಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ .

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿನಾಂಕ 22.06.2016 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಮ್ಮ ಊರಿನ ಹಾಲದಮ್ಮನ ದೇವಸ್ಥಾನದ ಹತ್ತಿರ ನಾನು ಮತ್ತು ಚಾಸಾ–4 ಮಾತನಾಡುತ್ತಾ ಕುಳಿತಿರುವಾಗ ದೇವಸ್ಥಾನದ ಆವರಣದಲ್ಲಿ ಆರೋಪಿಗಳು ತಮ್ಮ ಕೈಯಲ್ಲಿ ಕ್ರಿಕೇಟ್ ಬ್ಯಾಟ್ ಹಿಡಿದುಕೊಂಡು ಬರುತ್ತಿರುವಾಗ ಚಾಸಾ–2 ತನ್ನನ್ನು ಸೇರಿಸಿಕೊಳ್ಳಿ ಎಂದು ಕೇಳಿದಾಗ ಆರೋಪಿಗಳು ಹಳೆ ದ್ವೇಷದಿಂದ ಚಾಸಾ–2 ರವರಿಗೆ ಆಟಕ್ಕೆ ಸೇರಿಸಿಕೊಳ್ಳುವುದಿಲ್ಲ,

ಹೋಗೋ ಬೋಳಿಮಗನೆ ಎಂದು ಹೇಳಿರುತ್ತಾರೆಂದರೆ ನಾನು ಅಲ್ಲಿ ಇರಲಿಲ್ಲ. ನಂತರ 1 ನೇ ಆರೋಪಿ ತನ್ನ ಕ್ರಿಕೇಟ್ ಬ್ಯಾಟ್ ನಿಂದ ಚಾಸಾ-2 ರವರ ಬಲತೋಳಿಗೆ ಮತ್ತು 2 ನೇ ಆರೋಪಿ ಚಾಸಾ-2 ರವರ ಬಲಕಾಲಿನ ಪಾದಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ ಚಾಸಾ-3 ರವರಿಗೆ 1 ನೇ ಆರೋಪಿ ಕ್ರಿಕೇಟ್ ಬ್ಯಾಟ್ ನಿಂದ ಅವರ ಎಡಭುಜಕ್ಕೆ ಮತ್ತು 2 ನೇ ಆರೋಪಿಯೂ ಸಹ ಕ್ರಿಕೇಟ್ ಬ್ಯಾಟ್ ನಿಂದ ಚಾಸಾ-3 ರವರ ಎಡಭುಜಕ್ಕೆ ಹೊಡೆದಿರುತ್ತಾರೆಂದರೆ ನಾನು ನೋಡಿಲ್ಲ. ಅಷ್ಟರಲ್ಲಿ ನಾನು ಮತ್ತು ಚಾಸಾ-4 ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳು ತಮ್ಮ ಕೈಯಲ್ಲಿದ್ದ ಕ್ರಿಕೇಟ್ ಬ್ಯಾಟ್ ಗಳನ್ನು ಸ್ಥಳದಲ್ಲಿಯೆ ಬಿಸಾಡಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಗಲಾಟೆಯ ಶಬ್ದ ಕೇಳಿ ಚಾಸಾ-6 ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಚಾಸಾ-1 ರವರು ಸ್ಥಳಕ್ಕೆ ಬಂದು ಚಾಸಾ-2 ಮತ್ತು 3 ರವರನ್ನು ಯಾವುದೋ ಒಂದು ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಂತರ ಚಾಸಾ-8 ಮತ್ತು 9 ರವರು ತೀರ್ಮಾನ ಮಾಡುತ್ತೇವೆಂದು ತಿಳಿಸಿದ್ದು, ಆರೋಪಿಗಳು ಪಂಚಾಯಿತಿಗೆ ಬರದಿದ್ದ ಕಾರಣ ಚಾಸಾ-1 ತಡವಾಗಿ ದೂರು ನೀಡಿರುವ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ಕೆಂಪು ಶಾಹಿಯಿಂದ ಗುರುತಿಸಲಾದ ಸದರಿ ಹೇಳಿಕೆಯ ಭಾಗವನ್ನು ನಿ.ಪಿ-7 ಎಂದು ಗುರುತಿಸಲಾಯಿತು. ಆರೋಪಿಗಳು ಚಾಸಾ-2 ಮತ್ತು 3 ರವರಿಗೆ ಹಲ್ಲೆ ಮಾಡಿದ್ದು, ನಂತರ ನಾನು ಮತ್ತು ಚಾಸಾ-4 ಗಲಾಟೆ ಬಿಡಿಸಿದ್ದರೂ ಕೂಡ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ನಂಜನಗೂಡು.**